# ಬಲೂನ್ ಭೂತ

■ ಅರವಿಂದ ಜಿ. ಜೋಷಿ

ಕಲೆ: ಸಂತೋಷ್ ಸಸಿಹಿತ್ಲು

ತುಂಬೇಗುಡ್ಡದ ಇಳಿಜಾರು ಪ್ರದೇಶದಲ್ಲಿ, ಸಿದ್ದನಪುರ ಎಂಬ ಪುಟ್ಟ ಗ್ರಾಮ ಇತ್ತು. ಆ ಗ್ರಾಮ ಪುಟ್ಟದಾದರೂ ಅಲ್ಲಿ ವರ್ಷಕ್ಕೊಮ್ಮೆ ನಡೆಯುವ ಜಾತ್ರೆಗೆ ಹೆಸರುವಾಸಿ ಆಗಿತ್ತು. ಎರಡು ದಿನಗಳ ಜಾತ್ರೆಗೆ ಅಕ್ಕಪಕ್ಕದ ಗ್ರಾಮದ ಜನ ಸೇರುತ್ತಿದ್ದರು. ಜಾತ್ರೆಯ ಎರಡನೇ ದಿನವೇ ಸಿದ್ದಪ್ಪಾಜಿಯ ರಥೋತ್ಸವ ಜರುಗುತ್ತಿತ್ತು. ಆಕರ್ಷಕ ರಥೋತ್ಸವದ ಮುನ್ನ ಸಾಂಪ್ರದಾಯಿಕ ಪೂಜೆ ಪುನಸ್ಕಾರಗಳನ್ನು ಮುಗಿಸಿ ಆ ಗ್ರಾಮದ ಹಿರಿಯರು, ವಿಧ ವಿಧ ಬಣ್ಣದ ವಿಧ ವಿಧ ಆಕಾರದ ಬಲೂನ್‌ಗಳಿಗೆ ದಾರಕಟ್ಟಿ ಅದನ್ನು ಆಕಾಶಕ್ಕೆ ಹಾರಿ ಬಿಡುತ್ತಿದ್ದರು.

ಆ ಗುಡ್ಡದ ಇನ್ನೊಂದು ಪಾರ್ಶ್ವದಲ್ಲಿ ದಟ್ಟವಾಗಿ ಬೆಳೆದ ಗಿಡಗಂಟಿಗಳ ಪೊದೆಯೊಳಗೆ ನಾಲ್ಕೈದು ಮುದ್ದಾದ ಮೊಲಗಳು ತಮ್ಮ ಮರಿಗಳೊಂದಿಗೆ ವಾಸಿಸುತ್ತಿದ್ದವು. ಅವುಗಳ ಮರಿಗಳು ತುಂಬಾ ಪುಟ್ಟದಾಗಿದ್ದರಿಂದ ಅವಕ್ಕೆ ಆಹಾರ ತರಲು ದೊಡ್ಡಮೊಲಗಳು ಹೋಗುತ್ತಿದ್ದವು. ಹೀಗೆ ಒಂದು ಬಾರಿ ಈ ಮೊಲಗಳು ಆಹಾರ ತರಲು ಹೋದಾಗ, ರಥೋತ್ಸವದ ವೇಳೆ ಆಕಾಶದಲ್ಲಿ ಹಾರಿ ಬಿಟ್ಟಂತಹ ತರಹೇವಾರಿ ಬಲೂನ್‌ಗಳು ಗಾಳಿಗೆ ಹಾರಿ ಬಂದು ಈ ಮೊಲಗಳು ವಾಸಿಸುತ್ತಿದ್ದ ಪೊದೆಯ ಸುತ್ತಲೂ ಇದ್ದ ಗಿಡಗಂಟಿಗಳಿಗೆ ಸಿಲುಕಿದ್ದವು. ಸ್ವಲ್ಪ ಗಾಳಿ ಬೀಸಿ ಬಂದರೆ ಸಾಕು ಇತ್ತಿಂದತ್ತ ಅತ್ತಿಂದಿತ್ತ ಅಲ್ಲಾಡುತ್ತಿದ್ದವು. ಇತ್ತ ಖುಷಿ ಖುಷಿಯಿಂದ ಆಹಾರ ತಂದ ಮೊಲಗಳು ತಮ್ಮ ಪೊದೆಯತ್ತ ಬರುವಾಗ ದೂರದಿಂದಲೇ, ಪೊದೆಯ ಸುತ್ತ ಬಲೂನ್‌ಗಳು ಅಲ್ಲಾಡುತ್ತಿರುವುದನ್ನು ಗಮನಿಸಿ ಭಯದಿಂದ ಕಣ್ಣರಳಿಸಿ ನೋಡುತ್ತ ನಿಂತವು. ಅವುಗಳ ಪೈಕಿ ಒಂದು ಮೊಲ 'ನೋಡಿದೆಯಾ ಅಕ್ಕಾ... ನಾವು ಇಲ್ಲಿ ಇರದಿರುವಾಗ ಎಲ್ಲಿಂದಲೋ ಬಂದ ಈ ಭೂತಗಳು ನಮ್ಮ ಮರಿಗಳನ್ನು ಕಬಳಿಸಲು ಹವಣಿಸುತ್ತಿವೆ' ಎಂದು ಅನುಮಾನ ವ್ಯಕ್ತಪಡಿಸಿತು.

ಉಳಿದ ಮೊಲಗಳು ಅದರ ಮಾತು ನಿಜವೇನೋ ಎಂದ ಅರಿತು ಗಾಬರಿಗೊಂಡು ಒಂದು ಹೆಜ್ಜೆಯನ್ನೂ ಮುಂದಿಡದೇ ಎಲ್ಲವೂ ಸೇರಿ ಜೋರಾಗಿ 'ಕಾಪಾಡಿ, ಯಾರಾದರೂ ಕಾಪಾಡಿ' ಎಂದು ಒಂದೇ ಸಮನೆ ಬೊಬ್ಬೆ ಹಾಕತೊಡಗಿದವು. ಆಗ ಅದೇ ಮಾರ್ಗದಲ್ಲಿ ಹೋಗುತ್ತಿದ್ದ ಕಾಗೆಯೊಂದು ಅವುಗಳ ಕೂಗು ಕೇಳಿಸಿಕೊಂಡು ಅವುಗಳ ಬಳಿ ಬಂದು 'ಯಾಕಣ್ಣಾ... ಯಾಕಕ್ಕಾ.. ಯಾಕೆ ಹೀಗೆ ಗಾಬರಿ ಬಿದ್ದು ಭಯ ಪಡುತ್ತಿದ್ದೀರಿ ಏನು ಸಮಾಚಾರಾ?' ಎಂದು ಕೇಳಿದಾಗ ಆ ಮೊಲದ ಗುಂಪಿನ ಹಿರಿಯ ಮೊಲ ಎಲ್ಲಾ ವಿವರಿಸಿ 'ಅಗೋ... ನೋಡಲ್ಲಿ ಕಾಗಣ್ಣಾ ನಮ್ಮ ಪೊದೆಯ ಸುತ್ತ ಅಲ್ಲಲ್ಲಿ ಸಾಕಷ್ಟು ಬಣ್ಣ ಬಣ್ಣದ ಭೂತಗಳು ಕುಣಿಯುತ್ತಿವೆ, ಪಾಪ ಅಲ್ಲಿ ಉಪವಾಸ ಕುಳಿತ ನಮ್ಮ ಮರಿಗಳ ಪಾಡು...' ಎಂದು ಮುಂದಕ್ಕೆ ಹೇಳದೇ ಬಿಕ್ಕಳಿಸತೊಡಗಿತು. ಅದನ್ನು ಕೇಳಿಸಿಕೊಂಡ ಕಾಗೆ 'ಹೆದರಬೇಡಿ, ನಾನು ಹೋಗಿ ನೋಡಿ ಬರುವೆ' ಎನ್ನುತ್ತ ಸ್ವಲ್ಪ ಎತ್ತರಕ್ಕೆ ಹಾರಿ, ಒಂದು ಬಲೂನ್ ಬಳಿ ಬಂದು ಅತ್ತ ಇತ್ತ ನೋಡಿದಂತೆ ಮಾಡಿ ರಭಸದಿಂದ ತನ್ನ ಹರಿತವಾದ ಕೊಕ್ಕಿನಿಂದ ಅದಕ್ಕೆ ಜೋರಾಗಿ ಕುಕ್ಕಿದಾಗ 'ಠಪ್' ಎನ್ನುವ ಶಬ್ದ ಹೊರಬಂದಿತು. ಆಗ ದೂರದಲ್ಲಿ ನಿಂತು ಇದನ್ನೇ ನೋಡುತ್ತಿದ್ದ ಮೊಲಗಳಲ್ಲದೆ ಈ ಕಾಗೆ ಕೂಡ ಭಯಗೊಂಡು ಮೇಲೆ ಹಾರಿತು. ಠುಸ್ಸಾದ ಬಲೂನ್ ರಬ್ಬರ್‌ನಿಂದ ಯಾವ ಪ್ರತಿಕ್ರಿಯೆಯೂ ಬಾರದಿದ್ದಾಗ

ಕಾಗೆಗೆ ಹೋ... ಇವು ಭೂತವು ಅಲ್ಲ, ಗೀತವೂ ಅಲ್ಲ ಎಂದು ದೃಢಪಟ್ಟು ಮತ್ತೆ ಹಾರುತ್ತ ಬಂದು ಅಲ್ಲಿದ್ದ ಎಲ್ಲಾ ಬಲೂನ್‌ಗಳನ್ನು ಕೊಕ್ಕಿನಿಂದ ಚುಚ್ಚಿ 'ಠಪ್ ಠಪ್' ಎಂದು ಒಡೆದು ಹಾಕಿತು. ಆ ನಂತರ ಮೊಲಗಳಿದ್ದಲ್ಲಿಗೆ ಬಂದು ನೋಡಿದರೆ ಎಲ್ಲ ಮೊಲಗಳು ತಮ್ಮ ಎರಡೂ ಕಿವಿ ಮುಚ್ಚಿಕೊಂಡು ಗಾಬರಿಯಿಂದ ಕುಳಿತಿದ್ದವು. ಅವುಗಳ ಹತ್ತಿರ ಬಂದ ಕಾಗೆ 'ಅವು ಭೂತವೂ ಅಲ್ಲ, ಗೀತವೂ ಅಲ್ಲ... ಗಾಳಿ ತುಂಬಿದ ಬಲೂನ್' ಎಂದು ಹೇಳಿದಾಗ ಎಲ್ಲ ಮೊಲಗಳಿಗೂ ಧೈರ್ಯ ಬಂದಂತಾಗಿ 'ಹೌದಾ... ಹೌದಾ..' ಎನ್ನುತ್ತ ಖುಷಿಯಿಂದ ಓಡಿಬಂದು ತಮ್ಮ ಮರಿಗಳಿಗೆ ಆಹಾರ ನೀಡಿ ಮನದಲ್ಲಿ ಕಾಗೆಗೆ ಥ್ಯಾಂಕ್ಸ್ ಹೇಳಿದವು.

■

